ಹಿಡಿದ ಹಗ್ಗ ಬಿಡುವವರಲ್ಲ ಅವ್ರು, ಅಷ್ಟೆ. ನಾನು ಇನ್ನೊಮ್ಮೆ ವಾಸು ತಂತ್ರಿಗಳತ್ರ ಕೇಳಿ ನೋಡ್ತೇನೆ ಬಿಡು; ನಂತರ ನಮ್ಮ ಶ್ರೀಧರಾಚಾರಿಯನ್ನೂ ಒಮ್ಮೆ ವಿಚಾರಿಸ್ತೇನೆ. ಕೊನೇಗೆ ಕಟೀಲಿನ ದೊಡ್ಡ ಅಸ್ರಣ್ಣರನ್ನೊಮ್ಮೆ ಕೇಳಿದ್ರೆ ಆಯ್ತು. ನಮ್ಮ ಅಸ್ರಣ್ಣನವರು ಏನು ಹೇಳ್ತಾರೋ... ಕಡೆಗೆ ಹಾಗೇನೆ ಮಾಡಿ ಬಿಡೋದು' ಎಂದು ಅಂದವರೇ, 'ಆಯ್ತುಪ್ಪ ಗುರಿಕಾರ, ನಿನ್ನ ಸಮಯವನ್ನು ನಾನು ಬಾssssಳ ತಿಂದೆ; ಹಾಗಾದ್ರೆ ನಿನ್ನ ದೊಡ್ಡ ಓಡಕ್ಕೆ ನಮ್ಮ ಹುಸೇನನ ಕೈಯಲ್ಲಿ ಹೇಳಿ ಕಳಿಸುದಾ?...' ಎಂದು ಪೂವ ಗುರಿಕಾರನನ್ನು ಅವರು ಕೇಳುತ್ತಿದ್ದಂತೆ, ಆತನಲ್ಲಿ ಇನ್ನೊಂದು ಪ್ರಶ್ನೆಯ ತುರಿಕೆ ಎದ್ದಿತ್ತು.

'ಅಲ್ಲಾ ಪಟ್ಲೆರೆ... ನಂದೊಂದು ಪ್ರಶ್ನೆಯಿದೆ. ಆ ನಮ್ಮ ಜುಮಾದಿ ದೈವಸಾನದ ಮುಗುಳಿ (ಮುಕುಟ) ಕಳಚಿ ಬಿದ್ದು... ದೈವಕ್ಕೆ ಹೂ ನೀರು ಇಲ್ಲದೆ ಅದೂ ಮುಗುಚಿ ಬಿದ್ದಿದ್ದು ನಿಮ್ಮ ಅಪ್ಪನ ಅಜ್ಜನ ಕಾಲದಲ್ಲಿ ಇರಬಹುದಲ್ವ. ಆಗ ಅವರೇ ಊರಿನ ಪಟೇಲ್ರು ಆಗಿದ್ದಿರಬಹುದಲ್ವ?... ಅವ್ರು ಆ ದೈವವನ್ನು ಹಾಗೇ ಅಡ್ಡ ಬೀಳಲಿಕ್ಕೆ ಬಿಟ್ಟದ್ದಕ್ಕೆ, ಆ ಕಾಲದಲ್ಲಿ ಅವರ ಕುಟುಂಬಕ್ಕೆ ಏನೂ ಏತ್(ಅನಾಹುತ) ಆಗ್ಲಿಲ್ವಾ?...' ಎನ್ನುವ ಪ್ರಶ್ನೆಯನ್ನು ದೇವಪ್ಪ ಶೆಟ್ಟರಲ್ಲಿ ಆತ ಕೇಳಿದಾಗ, 'ಅರೆ ಮಾರಾಯ... ಭೂತದ ಏತ್ ಆಗದೆ ಏನು? ನನ್ನಜ್ಜನ ಅಪ್ಪನ ಕಾಲದಿಂದಲೂ... ಅಂದ್ರೆ ಯಾವಾಗ ಆ ಧೂಮಾವತಿ ದೈವ ಅಡ್ಡ ಮುಗಿಚಿತೋ... ಅಲ್ಲಿಂದ ಇಲ್ಲಿಯವರೆಗೂ ನಮ್ಮಲ್ಲಿ ಹೆಣ್ಣು ಸಂತಾನವಿಲ್ಲ. ಹೆಣ್ಣು ಹುಟ್ಟಿದ್ದರೂ ಬದುಕಿ ಬಾಳಿದ್ದೇ ಇಲ್ಲವಂತೆ. ಆ ತಲೆಮಾರಿನಿಂದಲೂ ನಾವು 'ಅಳಿಯಕಟ್ಟು' ಮುಂದುವರಿಸಲಿಕ್ಕೆ ಹೆಣ್ಣುಮಕ್ಕಳನ್ನು ದೂರದ ಸಂಬಂಧದಲ್ಲಿ ದತ್ತು ತಗೊಳ್ತಾ ಇದ್ದದ್ದಲ್ವ!...'

'ಇನ್ನೂ ಒಂದು ಕತೆ ಕೇಳಿಲ್ಲಿ; ನನ್ನಜ್ಜನ ಅಜ್ಜನವರ ಕಾಲದಲ್ಲಂತೆ... ಒಂದು ವಾರದ ಕಾಲ ರಕ್ಕಸ ಮಳೆ ಬಂತಂತೆ. ಫಲ್ಗುಣಿ ನದಿಯಲ್ಲಿ ನೆರೆಯೇರಿ, ದಿನಗಟ್ಟಲೆ ನಮ್ಮ ಊರೆಲ್ಲ ಆ ನೆರೆಯಲ್ಲಿ ಮುಳುಗಿ ಕೂತಿತೊ... ಆವಾಗ ಹಲವು ಮನೆಗಳ ಜೊತೆಗೆ ಆ ಧೂಮಾವತಿ ದೈವಸ್ಥಾನವೂ ಕುಸಿಯಿತಂತೆ. ನೆರೆ ಬಂತೂ... ಬಂತು... ಬಂತು; ಬಂದ ನೆರೆ ಇಳಿದು ಹೋಗದೆ ಮೊಂಡಾಟ ಮಾಡಿತು; ಬೆಳೆ ಕೊಳೆಯಿತು... ತಿನ್ನುವುದಕ್ಕೂ ತತ್ವಾರದ ದಿನಗಳವು. ದೈವವನ್ನು ಎಬ್ಬಿಸಿ ಕೂರಿಸಲು ಊರವರಲ್ಲಿ ಶಕ್ತಿಯೇ ಇಲ್ಲ. ಕೆಲವರಿಗೆ ಶಕ್ತಿ ಇದ್ದರೂ ಮನಸ್ಸಿಲ್ಲ. ಇನ್ನೂ ಕೆಲವರಿಗೆ 'ಆ ದೈವ ಪರವೂರಿಗರಿಗೆ ಮಾತ್ರ ಎದ್ದು ಬಿದ್ದು ಸಹಾಯ ಮಾಡುತ್ತೆ, ತಮಗಲ್ಲ. ತನ್ನಲ್ಲಿ ಅಷ್ಟೊಂದು ಕಾರ್ನಿಕ ಶಕ್ತಿ ಇದ್ದರೂ, ಈ ಊರನ್ನು ನೆರೆನೀರಿನಿಂದ ಕಾಪಾಡಿಲ್ಲವಲ್ಲ' ಎಂಬ ಸಿಟ್ಟು. ಒಟ್ಟಾರೆ ಆ ದೈವದ ಕೆಲಸಕ್ಕೆ ಯಾರೂ ಕೈ ಹಾಕಲೇ ಇಲ್ಲವಂತೆ. ನಮ್ಮ ಅಜ್ಜನ ಅಜ್ಜನ ಕೈಯಲ್ಲೂ, ಆ ಕೆಲಸ ಸಾಧ್ಯವಿಲ್ಲ; ಅವರೊಬ್ಬರಿಗೇ ಆ ದೈವವನ್ನು ಹೊತ್ತುಕೊಂಡು... ಎಬ್ಬಿಸಿ ಕೂರುವಷ್ಟು ತಾಕತ್ತಿಲ್ಲ. ಅವರಾಗ ಪಟೇಲರಾಗಿದ್ರೊ ಇಲ್ಲವೋ... ಗೊತ್ತಿಲ್ಲ. ಆದ್ರೆ ಊರಲ್ಲಿ ಆಗ ಅವರದ್ದು ಭಾರಿ ಕಾರುಬಾರು ನಡೆಯುತಿತ್ತಂತೆ; ಆದರೂ... ತಾನೊಬ್ಬನೇ ಯಾಕೆ ಮೇಲೆ ಬಿದ್ದು ಹೋಗಿ ಆ ದೈವವನ್ನು ಎಬ್ಬಿಸಿ ಕೂರಿಸ್ಬೇಕು ಎಂಬ ಉಡಾಫೆಯಿಂದ ಆ ದೈವನನ್ನು ಎಬ್ಬಿಸಿ ಕೂರಿಸುವ ಬದಲು, ಅವರ ಕಣ್ಣಬಿಂಬ ಹಾಗೂ 'ಅರೆವ ಕಲ್ಲಿನಂತಿದ್ದ' ಸೂಳೆಸಿದ್ದುವಿನ ಮಗಳ ಜತೆಗೆ ಅವರು ಇನ್ನಿಲ್ಲದಂತಹ ಆಟಗಳನ್ನಾಡುತ್ತ ಅಲ್ಲೇ ಕಾಲ ಕಳೆದು, ಅಡ್ಡ ಬಿದ್ದಿದ್ದ ಆ ದೈವವನ್ನು ಮರೆತೇ ಬಿಟ್ರಂತೆ. ಆದ್ರೆ ಅದೇನು ಸಾಧಾರಣದ ದೈವವಾ?!... ಬಾರೀ ಕಾರ್ನಿಕದ್ದಂತೆ. ಅದು ಇವ್ರಿಗೆ ಮಾತ್ರವಲ್ಲ ಊರಿನ ಹಲವು ಗಟ್ಟಿ ಕುಳವಾರುಗಳಿಗೆ ತನ್ನ 'ಬಲ'ವನ್ನು ತೋರಿಸ್ತ ಇತ್ತಂತೆ. ನನ್ನಜ್ಜನ ಅಪ್ಪ, ನನ್ನಜ್ಜನಿಗೆ ಆ ದೈವದ ಕಾರ್ನಿಕದ ಬಗ್ಗೆ ಒಂದು